


ಎಸ್.ಪಿ. ಮಂಜುನಾಥ್

# ನೇಪಥ್ಯ

ಚಿತ್ರಗಳು: ವೆಂಕಟ್ರಮಣ ಭಟ್

ಫೋನ್ ಮತ್ತೆ ರಿಂಗಾಯಿತು. ನಾಲ್ಕನೆಯ ಬಾರಿ. ನಾನು ಸೈಯದ್‌ನಿಗೆ ಸನ್ನೆ ಮಾಡಿ ಕರೆ ಸ್ವೀಕರಿಸಲು ತಿಳಿಸಿದೆ. ಅಲ್ಲದೇ, ಎಲ್ಲಿಂದ ಈ ಕರೆ ಬರುತ್ತಿದೆ ಎಂದು ತಿಳಿಯಲು ಸರ್ವೆಲೆನ್ಸ್ ವ್ಯವಸ್ಥೆ ಜಾರಿ ಮಾಡುವಂತೆಯೂ ಹೇಳಿದೆ. ಅವನು ಕ್ಷಣಾರ್ಧದಲ್ಲಿ ನನ್ನ ಮೊಬೈಲ್ ಜೊತೆ ಪಕ್ಕದ ರೂಮಿಗೆ ಹೋದ. ನನಗೆ ಈಗ ಸತ್ಯೇಂದ್ರನ ಜೊತೆ ಮಾತು ಮುಂದುವರೆಸುವ ಇಚ್ಛೆ ಇರಲಿಲ್ಲ. ನನ್ನ ಮನಸ್ಸಿನ ತುಂಬ ಈ ಹೊಸ ಕರೆಯದೇ ಚಿಂತೆ.

ನಾನು ಮಾತು ಮುಂದುವರೆಸಲಿಲ್ಲ. ಮೌನಕ್ಕೆ ಸಂವಾದಿಯಾಗಿ ನನ್ನ ವಿದೇಶೀ ಸಿಗರೇಟು ಹೊಗೆಯುಗುಳಿತು. ಅದೆಷ್ಟೊ ಬಾರಿ ಅಂದು ಕೊಂಡಿದ್ದೇನೆ, ಈ ವ್ಯವಹಾರ ಬಿಟ್ಟು ಬಿಡಬೇಕು, ಎಲ್ಲರಂತೆ ಜನ ಸಾಮಾನ್ಯನಾಗಿ ಸಮಾಜದಲ್ಲಿ ಗೌರವಸ್ಥನಾಗಿ ನೆಮ್ಮದಿಯಿಂದ ಬದುಕಿ ಬಿಡಬೇಕು ಎಂದು. ನನಗೂ ಆಗಲೇ ಐವತ್ತಾಯಿತು ಅಲ್ಲವೆ? ಐವತ್ತೆಂಟು ವರ್ಷ ಸರ್ಕಾರೀ ನಿವೃತ್ತಿ ವಯಸ್ಸು. ಇಪ್ಪತ್ತು ವರ್ಷಕ್ಕೇ ಈ ವೃತ್ತಿಗೆ ಕಾಲಿಟ್ಟ ನನಗೆ ಮುವತ್ತು ವರ್ಷಗಳ